ವೇಳೆಯನ್ನು ವಿಸ್ತರಿಸಿರುವ ಕಾರಣದಿಂದ ಉಂಟಾಗಿರುವ ಪರಿಣಾಮವನ್ನು ಗುರುತಿಸಲು ಬರುವುದಿಲ್ಲ. ಒಟ್ಟಾರೆಯಾಗಿ ಪ್ರಸಕ್ತ ಸಾಲಿನ (2014–15) ಮಾರ್ಚ್, ಏಪ್ರಿಲ್, ಮೇ ಮಾಹೆಗಳ ಎಲ್ಲಾ ಶುಕ್ರವಾರ ಮತ್ತು ಶನಿವಾರಗಳಂದು ಮಾರಾಟವಾದ ಮದ್ಯ ಪ್ರಮಾಣದಲ್ಲಿ ಕಳೆದ ಸಾಲಿನ (2013–14) ಇದೇ ಅವಧಿಗೆ ಹೋಲಿಸಿದಲ್ಲಿ ಸುಮಾರು ಶೇ.2% ರಷ್ಟು ಹಾಗೂ ಬೀರ್ ಪ್ರಮಾಣದಲ್ಲಿ ಸುಮಾರು ಶೇ.5% ಬೆಳವಣಿಗೆಯಾಗಿರುತ್ತದೆ.

ಆ) ಪ್ರಸ್ತುತ ಇಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಪರವಾನಗಿಗಳ ಮಾಹಿತಿ

1469(1549), ಶ್ರೀ ಜಗದೀಶ್ ಕುಮಾರ್.ಆರ್.(ಹೆಬ್ಬಾಳ)

ಅ) ರಾಜ್ಯದಲ್ಲಿ ಪ್ರಸ್ತುತವಿರುವ ಎಲ್ಲಾ ಬಗೆಯ ಪರವಾನಗಿಗಳ ಮಾಹಿತಿ ಒದಗಿಸುವುದು; (ಜಿಲ್ಲಾವಾರು ಮಾಹಿತಿ);

ಆ) ಸದರಿ ಪರವಾನಗಿಗಳನ್ನು ನೀಡುವಾಗ ಮೀಸಲಾತಿಯನ್ನು ಅನುಸರಿಸಲಾಗಿದೆಯೇ; ಇದ್ದಲ್ಲಿ ಮಾಹಿತಿ ನೀಡುವುದು;

ಇ) ಹಾಲಿ ನೀಡಿರುವ ಒಟ್ಟು ಪರವಾನಗಿಗಳ ಪೈಕಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡದವರಿಗೆ ನೀಡಿರುವ ಪರವಾನಗಿಗಳ ಸಂಖ್ಯೆ ಎಷ್ಟು; (ಮಾಹಿತಿ ನೀಡುವುದು);

ಈ) 2011ರ ಜನಗಣತಿ ಆಧಾರದ ಮೇಲೆ ಹಾಲಿ ಚಾಲ್ತಿಯಲ್ಲಿರುವ ಅಬಕಾರಿ ಕಾಯ್ದೆಯನ್ವಯ ಮರು ನಿಗದಿಪಡಿದಲ್ಲಿ, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡದವರಿಗೆ ಜಿಲ್ಲಾವಾರು/ತಾಲ್ಲೂಕುವಾರು/ಹೋಬಳಿವಾರು ನೀಡಬೇಕಾಗಿರುವ ಸಿಎಲ್–2/ಸಿಎಲ್–9 ಪರವಾನಗಿಗಳ ಸಂಖ್ಯೆ ಎಷ್ಟು; (ಮಾಹಿತಿ ನೀಡುವುದು);

ಊ) ಚಾಲ್ತಿಯಲ್ಲಿರುವ ಅಬಕಾರಿ ಕಾಯ್ದೆಯನ್ವಯ ಸಿಎಲ್–2 ಪರವಾನಗಿದಾರರು ಕನಿಷ್ಠ ಎಷ್ಟು ಎಂ.ಎಲ್.ಗಳಿಗಿಂತ ಕಡಿಮೆ ಸೀಲ್ಡ್ ಬಾಟಲ್‌ಗಳನ್ನು ಮಾರಬಾರದು?

ಋ) ಹಾಲಿ ಚಾಲ್ತಿಯಲ್ಲಿರುವ ಅಬಕಾರಿ ಕಾಯ್ದೆಯನ್ವಯ ಸಿಎಲ್–9 ಪರವಾನಗಿದಾರರ ಬಾರ್‌ಗಳಲ್ಲಿ ಎಷ್ಟು ಪ್ರವೇಶ ದ್ವಾರಗಳಿರಬೇಕು?

ಶ್ರೀ ಸತೀಶ್ ಲಕ್ಷ್ಮಣರಾವ್ ಜಾರಕಿಹೊಳಿ (ಮಾನ್ಯ ಅಬಕಾರಿ ಸಚಿವರು)

ಅ) ರಾಜ್ಯದಲ್ಲಿ ಪ್ರಸ್ತುತವಿರುವ ಎಲ್ಲಾ ಬಗೆಯ ಮದ್ಯ ಮಾರಾಟ ಸನ್ನದುಗಳ ವಿವರ ಈ ಕೆಳಕಂಡಂತಿರುತ್ತದೆ.

ಸಿಎಲ್–2 (ಚಿಲ್ಲರೆ ಮದ್ಯ ಮಾರಾಟ ಅಂಗಡಿಗಳು)

ಸಿಎಲ್–4 (ಕ್ಲಬ್‌ಗಳು)

ಸಿಎಲ್–5 (ಆಕೇಷನಲ್ ಲೈಸೆನ್ಸ್)

ಸಿಎಲ್–6 (ಸ್ಪೇಷಲ್ ಲೈಸೆನ್ಸ್)

ಸಿಎಲ್–6ಎ (ಸ್ಟಾರ್ ಹೋಟೆಲ್‌ಗಳು)

ಸಿಎಲ್–7 (ಹೋಟೆಲ್ ಮತ್ತು ಬೋರ್ಡಿಂಗ್ ಹೌಸ್‌ಗಳು)

ಸಿಎಲ್–7(ಡಿ) (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಹೋಟೆಲ್ ಅಂಡ್ ಬೋರ್ಡಿಂಗ್ ಹೌಸ್ ಹೊಂದಲು ನೀಡುವ ಲೈಸೆನ್ಸ್)

ಸಿಎಲ್–8 (ಮಿಲಿಟರಿ ಕ್ಯಾಂಟಿನ್ ಸ್ಟೋರ್ಸ್)

ಸಿಎಲ್–9 (ಬಾರ್ ಮತ್ತು ರೆಸ್ಟೋರೆಂಟ್‌ಗಳು)

ಸಿಎಲ್–11 (ಡಿಸ್ಟ್ರಿಬ್ಯೂಟರ್ ಲೈಸೆನ್ಸ್)

ಸಿಎಲ್–11ಸಿ (ಎಂಎಸ್‌ಐಎಲ್) ಮಳಿಗೆಗಳು

ಸಿಎಲ್–14 (ಟೂರಿಸ್ಟ್ ಹೋಟೆಲ್ ಲೈಸೆನ್ಸ್)

ಸಿಎಲ್–15 (ಟೂರಿಸ್ಟ್ ಹೋಟೆಲ್ ಬೀರ್ ಬಾರ್ ಲೈಸೆನ್ಸ್)

ಸಿಎಲ್–16 (ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಪ್ರಯಾಣಿಕರಿಗೆ)

ಸಿಎಲ್–17/18 (ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರಿಗಾಗಿ ನೀಡಲಾಗುವ ಸನ್ನದು)

ಆರ್.ವಿ.ಬಿ. (ರಿಟೈಲ್ ವೆಂಡ್ ಆಫ್ ಬೀರ್)

ವೈನ್ ಟಾವರೀನ್

ವೈನ್ ಬೋಟಿಕ್

ಮೈಕ್ರೋ ಬ್ರೀವರಿ

ಜಿಲ್ಲಾವಾರು ಮಾಹಿತಿಯನ್ನು ಅನುಬಂಧ–1 ರಲ್ಲಿ ಒದಗಿಸಿದೆ.

ಆ) ಮದ್ಯ ಮಾರಾಟ ಸನ್ನದುಗಳನ್ನು ನೀಡುವಾಗ ಮೀಸಲಾತಿಯನ್ನು ಅನುಸರಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

ಇ) ರಾಜ್ಯದಲ್ಲಿ ಪ್ರಸ್ತುತ ಇರುವ ಸನ್ನದುದಾರರ ಪೈಕಿ ಅನುಸೂಚಿತ ಜಾತಿ/ಅನುಸೂಚಿತ ಪಂಗಡಕ್ಕೆ ಸೇರಿದವರ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ವರ್ಗ	ಸನ್ನದು ವಿಧ			ಒಟ್ಟು
	ಸಿಎಲ್–2	ಸಿಎಲ್–7	ಸಿಎಲ್–9	
ಅನುಸೂಚಿತ ಜಾತಿ	56	16	32	104
ಅನುಸೂಚಿತ ಪಂಗಡ	46	10	24	80

ಈ) ಕರ್ನಾಟಕ ಅಬಕಾರಿ (ದೇಶಿ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968 ನಿಯಮ 12ರ ಅನ್ವಯ 1991ರ ಜನಗಣತಿಗೆ

ಅನುಗುಣವಾಗಿ ಗರಿಷ್ಠ ಪ್ರಮಾಣದ ಸನ್ನದುಗಳನ್ನು ನಿಗಧಿಪಡಿಸಲಾಗಿದೆ. ಮದ್ಯ ಮಾರಾಟ ಸನ್ನದುಗಳನ್ನು ನೀಡುವಾಗ ಮೀಸಲಾತಿಯನ್ನು ಅನುಸರಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

ಊ) ಚಾಲ್ತಿಯಲ್ಲಿರುವ ಅಬಕಾರಿ ಕಾಯ್ದೆಯನ್ವಯ ಸಿಎಲ್–2 ಪರವಾನಗಿದಾರರು ಕನಿಷ್ಠ 180, ಎಂ.ಎಲ್.ಗಳಿಗಿಂತ ಕಡಿಮೆ ಸೀಲ್ಡ್ ಬಾಟಲ್‌ಗಳನ್ನು ಮಾರಬಾರದು.

ಊ) ಸಿಎಲ್–9 ಪರವಾನಗಿದಾರರ ಬಾರ್‌ಗಳಲ್ಲಿ ಒಂದು ಪ್ರವೇಶದ್ವಾರವಿರಬೇಕು.

DISTRICTWISE LICENCES RENEWED FOR EXCISE YEAR 2013-14 (P) (Renewed up to MARCH, 2013)





FD III ELQ/14.